ಈ ಲೈಸೆನ್ಸ್ ಕೊಡುವುದು ಎನ್ನುವುದನ್ನು ತಮ್ಮ ಮಾಹಿತಿಗಾಗಿ ಕಳುಹಿಸಿಕೊಡುತ್ತಿದ್ದೇನೆ.

ಶ್ರೀ ಎನ್. ಸಂಪಂಗಿ: ನಾನು ಎಲ್ಲೂ ಕೂಡ ಮರಳಿನ ಬಗ್ಗೆ ಪ್ರಶ್ನೆ ಕೇಳಲೇ ಇಲ್ಲ. ಅದನ್ನು ಹುಡುಕಿಕೊಂಡು ತಾವೇ ಉತ್ತರ ಕೊಟ್ಟಿದ್ದೀರಿ. ನಾನು ಕಲ್ಲು ಗಾಣಿಗಾರಿಕೆ ನಡೆಯುತ್ತಿರುವ ಬಗ್ಗೆ ಕೇಳುತ್ತಿದ್ದೇನೆ. ಇದರಲ್ಲಿ ನೀವು 261 ಗಣಿಗಾರಿಕೆಗೆ ಪರವಾನಗಿ ಕೊಟ್ಟಿದ್ದೀರಿ. ಆದರೆ ಎಲ್ಲವನ್ನೂ ಬೆಂಗಳೂರಿನ ಸುತ್ತ ಮುತ್ತಲಿನಲ್ಲಿರುವವರಿಗೇ ಕೊಟ್ಟಿದ್ದೀರಿ. ಅಲ್ಲಿ local ಆಗಿರುವಂತಹ ಅದೇ ಒಂದು ಜನಾಂಗದ ಕಲ್ಲು ಕಟ್ಟಡ ಕಟ್ಟುವವರಿಗಾಗಲಿ, ಅಥವಾ ಕಲ್ಲಿನ ಕೆಲಸ ಮಾಡುವವರಿಗೆ ನೀವು ಯಾರಿಗೂ ಕೊಟ್ಟಿಲ್ಲ. ಬೆಂಗಳೂರಿನ ಸುತ್ತಮುತ್ತ ವ್ಯಾಪಾರಕ್ಕಾಗಿ ಇದನ್ನು ಇಟ್ಟುಕೊಂಡಿದ್ದಾರೆ. ನಾನು ಕೇಳುವುದೇನೆಂದರೆ, ತಾವು ಏನು ಪರವಾನಗಿ ಕೊಟ್ಟಿದ್ದೀರಿ, ಅದರಿಂದ illegal mining ಮಾಡುತ್ತಿದ್ದಾರೆ. ಅದನ್ನು ತಕ್ಷಣ ನೀವು ನಿಲ್ಲಿಸಬೇಕು. ಅಕ್ರಮ ಗಣಿಗಾರಿಕೆ ನಿಲ್ಲಿಸಲು ತಾವು ಎಷ್ಟು ದಿನಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎಸ್. ಸುರೇಶ್‌ಕುಮಾರ್: ಎಲ್ಲೆಲ್ಲಿ ಲೈಸೆನ್ಸ್ ಅವಧಿ ಮುಗಿದ ಮೇಲೂ ಗಣಿಗಾರಿಕೆ ಮಾಡುತ್ತಿದ್ದಾರೆ, ತಕ್ಷಣ ಅದರ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಶ್ರೀ ವಸಂತ ಬಂಗೇರರವರು ಹಾಜರಿಲ್ಲ.

ಕನಕಪುರ ತಾಲ್ಲೂಕು ಹಾರೋಹಳ್ಳಿ ಹೋಬಳಿಯ ಸಿದ್ದಪುರ ಗ್ರಾಮದ ಹತ್ತಿರ ಕಸಾಯಿ ಖಾನೆ ಕುರಿತು

100(77) ಶ್ರೀ ಕೆ. ರಾಜು (ರಾಮನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನಕಪುರ ತಾಲ್ಲೂಕು ಹಾರೋಹಳ್ಳಿ ಹೋಬಳಿಯ ಸಿದ್ದಾಪುರ ಗ್ರಾಮದ ಹತ್ತಿರ ಕಸಾಯಿಖಾನೆಯನ್ನು ತೆರೆಯಲು ಸರ್ಕಾರ ಸ್ಥಳ ಗುರುತಿಸಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಸ್ಥಳೀಯ ಸುತ್ತಮುತ್ತಲ ಗ್ರಾಮಸ್ಥರು ಕಸಾಯಿ ಖಾನೆಯನ್ನು ತೆರೆಯುವುದರ ವಿರುದ್ಧ ಪ್ರತಿನಿತ್ಯ ಪ್ರತಿಭಟಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಸಾರ್ವಜನಿಕರ ಪ್ರತಿಭಟನೆಯ ನಡುವೆಯೂ ಕಸಾಯಿ ಖಾನೆ ತೆರೆಯಲು ಸರ್ಕಾರ ನಿರ್ಧರಿಸಲು ಕಾರಣಗಳೇನು;

ಈ) ಈ ಪ್ರದೇಶದಲ್ಲಿ ಕಸಾಯಿ ಖಾನೆ ತೆರೆಯುವುದರಿಂದ ಸ್ಥಳೀಯ ಕೈಗಾರಿಕಾ ಪ್ರದೇಶಾಭಿವೃದ್ಧಿ ಗೆ ತೊಂದರೆಯಾಗುವುದಿಲ್ಲವೆ;

ಉ) ಸ್ಥಳೀಯ ಸಾರ್ವಜನಿಕರು ಪ್ರತಿಭಟಿಸುತ್ತಿರುವುದು ಈ ಕಸಾಯಿ ಖಾನೆಯನ್ನು ಬೇರೆ ಕಡೆ ತೆರೆಯಲು ಸರ್ಕಾರಕ್ಕಿರುವ ತೊಂದರೆಗಳೇನು?

ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು)

ಅ) ಹೌದು.

ಆ) ಹೌದು. ಕೆಲವು ಗ್ರಾಮಸ್ಥರು ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇ) ಬೆಂಗಳೂರು ನಗರದಲ್ಲಿರುವ ಪ್ರಾಣಿಗಳ ವಧಾಗಾರ/ಕಸಾಯಿ ಖಾನೆಗಳನ್ನು ನಗರದ ಹೊರವಲಯಕ್ಕೆ ಸ್ಥಳಾಂತರಿಸುವಂತೆ ಕೋರಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ರಿಟ್ ಅರ್ಜಿ ಸಂಖ್ಯೆ:5709/1997ಅನ್ನು ಸಲ್ಲಿಸಿದ್ದು, ಈ ಸಂಬಂಧ ಉಚ್ಚ ನ್ಯಾಯಾಲಯವು ದಿನಾಂಕ 13–8–2002ರಂದು ನೀಡಿರುವ ಆದೇಶದಲ್ಲಿ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿನ ಪ್ರಾಣಿಗಳ ವಧಾಗಾರಗಳನ್ನು 6 ತಿಂಗಳೊಳಗೆ ನಗರದ ಹೊರವಲಯಕ್ಕೆ ಸ್ಥಳಾಂತರಿಸುವಂತೆ ನಿರ್ದೇಶನ ನೀಡಿತ್ತು. ಅದರಂತೆ ಈ ಮೊದಲು ಅನೇಕಲ್ ತಾಲ್ಲೂಕು, ಚಂದಾಪುರ ಹೋಬಳಿ, ಇಗ್ಗಲೂರು ಗ್ರಾಮದ ಪಕ್ಕದ ಕೆರೆ ಕೆಳಗಡೆ ಗದ್ದೆ ಪ್ರದೇಶದಲ್ಲಿ 40.0 ಎಕರೆ ಭೂಸ್ವಾಧೀನ ಮಾಡಿದ್ದು, ಇದರ ಸಮೀಪ ಸೂರ್ಯನಗರ ಸಹಾ ಇದ್ದು, ಈ ಬಗ್ಗೆ ಸ್ಥಳೀಯ ನಾಗರೀಕರು ತೀವ್ರ ತರಹದ ಪ್ರತಿರೋಧ ವ್ಯಕ್ತಪಡಿಸಿದ್ದರಿಂದ ಸದರಿ ಸ್ಥಳದಲ್ಲಿ ಆಧುನಿಕ ಕಸಾಯಿಖಾನೆ ತೆರೆಯುವುದನ್ನು ಕೈಬಿಟ್ಟು, ಹಾರೋಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಆಧುನಿಕ ಕಸಾಯಿ ಖಾನೆ ನಿರ್ಮಾಣ ಮಾಡುವುದಕ್ಕಾಗಿ 40.0 ಎಕರೆ ಪ್ರದೇಶವನ್ನು ಕೆ.ಐ.ಎ.ಡಿ.ಬಿ. ಯಿಂದ ಪಡೆಯಲಾಗಿರುತ್ತದೆ. ಆದ್ದರಿಂದ ಕೈಗಾರಿಕಾ ಪ್ರದೇಶದ ಮಧ್ಯೆ ಕ್ಲೋಸ್ಡ್ ಸ್ಟ್ರಕ್ಚರ್‌ನಲ್ಲಿ ನ್ಯಾಯಾಲಯದ ನಿರ್ದೇಶದನ್ವಯ ಆಧುನಿಕ ಕಸಾಯಿಖಾನೆ ನಿರ್ಮಾಣ ಮಾಡುವುದು ಅನಿವಾರ್ಯವಾಗಿರುತ್ತದೆ.

ಈ) ಕನಕಪುರ ತಾಲ್ಲೂಕು ಹಾರೋಹಳ್ಳಿ ಗ್ರಾಮದ 2 ಕಿ.ಮೀಟರ್‌ನಲ್ಲಿ 1200 ಎಕರೆ ಕೈಗಾರಿಕಾ ಪ್ರದೇಶದ ಮಧ್ಯೆ ಭಾಗದಲ್ಲಿ 40 ಎಕರೆ ಪ್ರದೇಶದಲ್ಲಿ

ಆಧುನಿಕ ವಧಾಗಾರಕ್ಕೆ ಭೂಮಿ ಹಂಚಿಕೆ ಪಡೆದಿರುವುದರಿಂದ ಹಾಗೂ ತಮಿಳುನಾಡಿನ ಚೆನ್ನೈಯಲ್ಲಿ ಹಾಗೂ ಆಂಧ್ರ ಪ್ರದೇಶದ ಹೈದರಾಬಾದ್‌ನಲ್ಲಿ ವಧಾಗಾರ ನಿರ್ವಹಿಸುತ್ತಿರುವಂತೆ ಕ್ಲೋಸ್ಡ್ ಶೆಡ್‌ಗಳಲ್ಲಿ ವೈಜ್ಞಾನಿಕವಾಗಿ ಅತ್ಯಾಧುನಿಕ ವಧಾಗಾರದ ನಿರ್ಮಾಣ ಮಾಡುವುದರಿಂದ ಇತರೆ ಕೈಗಾರಿಕಾ ಪ್ರದೇಶಕ್ಕೆ ಯಾವುದೇ ತೊಂದರೆ ಆಗುವುದಿಲ್ಲ.

ಊ) ಬೆಂಗಳೂರು ನಗರದ ಆಸುಪಾಸಿನಲ್ಲಿ ಕಸಾಯಿಖಾನೆ ಸ್ಥಾಪಿಸಲು ಅವಶ್ಯವಾಗಿರುವ ಸ್ಥಳದ ಲಭ್ಯತೆ ಕಠಿಣಕರವಾಗಿರುವುದರಿಂದ ಈ ಸ್ಥಳದಲ್ಲಿ ಕಸಾಯಿಖಾನೆಯನ್ನು ಸ್ಥಾಪಿಸುವುದು ಸೂಕ್ತವಾಗಿರುತ್ತದೆ.

ಶ್ರೀ ಕೆ. ರಾಜು (ರಾಮನಗರ): ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ. ಹಾರೋಹಳ್ಳಿ ಹೋಬಳಿ, ಬೆಂಗಳೂರು ಗ್ರಾಮದಿಂದ ಬಹಳ ಹತ್ತಿರ ಇರುವಂತಹ ಹೋಬಳಿ. ಈಗಾಗಲೇ ಅಲ್ಲಿ 1,200 ಎಕರೆ ಜಮೀನು KIADBಯಿಂದ ಕೈಗಾರಿಕಾ ಇಲಾಖೆಗೆ acquire ಮಾಡಿದ್ದಾರೆ. ಮತ್ತೆ ಮೂರನೇ ಹಂತವಾಗಿ 800 ಎಕರೆ ಜಮೀನು acquire ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ಹಾರೋಹಳ್ಳಿಯಿಂದ ಕೇವಲ ಒಂದೂವರೆ ಕಿ.ಮೀ ದೂರದಲ್ಲಿರುವ ಸ್ಥಳದಲ್ಲಿ ಆ ಗ್ರಾಮದಲ್ಲಿ ಕಸಾಯಿಖಾನೆ ಮಾಡಲು ಹೊರಟಿದ್ದಾರೆ. ಈಗಾಗಲೇ ದಲಿತ ಸಂಘಟನೆಗಳು, ಅನೇಕ ಸಂಘಟನೆಗಳು ಪ್ರತಿಭಟನೆ ಮಾಡಿದ್ದಾರೆ. ಆದರೂ ಕಸಾಯಿಖಾನೆ ಕೆಲಸ ಮಾಡಲು ಪ್ರಯತ್ನ ಮಾಡಿದ್ದಾರೆ. ಆದರೆ ಕೆಲಸ ಮಾಡಲು ಜನರು ಬಿಟ್ಟಿಲ್ಲ. ಕಾಂಪೌಂಡ್ ಕಟ್ಟಲು 1 ಕೋಟಿ 26 ಲಕ್ಷ ರೂಪಾಯಿ sanction ಮಾಡಿದ್ದಾರೆಂದು ಗೊತ್ತಾಗಿದೆ. 40 ಎಕರೆ ಜಮೀನೂ acquisition ಆಗಿದೆ ಎಂದು ಗೊತ್ತಾಗಿದೆ. ಆನೇಕಲ್ ತಾಲ್ಲೂಕಿನ ಇಗ್ಗಲೂರು ಗ್ರಾಮದಲ್ಲಿ ಈ ಕೆಲಸವನ್ನು ಮಾಡುತ್ತಿದ್ದರು. ಅಲ್ಲಿ ಪ್ರತಿಭಟನೆ ಮಾಡಿದಾಗ, ಪ್ರತಿಭಟನೆ ಮಾಡಿದರು ಎಂದು ಅದನ್ನು ಹಳ್ಳಿಯಿಂದ ಎಲ್ಲೋ ದೂರಕ್ಕೆ ಅಥವಾ ಕಾಡುಪ್ರದೇಶವಿರುವ ಪ್ರದೇಶಕ್ಕೆ ಅಥವಾ ಗೋಮಾಳ ಇರುವ ಪ್ರದೇಶಕ್ಕೆ ಸ್ಥಳಾಂತರಿಸಬೇಕೇ ಹೊರತು, ಹಾರೋಹಳ್ಳಿ ಗ್ರಾಮದ ಪಕ್ಕದಲ್ಲಿ ಕೇವಲ ಒಂದೂವರೆ ಕಿ.ಮೀ ದೂರದಲ್ಲಿ ಮಾಡುವಂತಹ ಅವಶ್ಯಕತೆ ಇದೆಯೇ? ಈಗಾಗಲೇ ಸಾಕಷ್ಟು ಪ್ರತಿಭಟನೆ ಆಗಿವೆ. ಯಾವುದೇ ಕಾರಣಕ್ಕೂ ಅದನ್ನು ಮಾಡಿಸಬಾರದು. ಅಲ್ಲಿಂದ 10–15 ಕಿ.ಮೀ ಹೋದರೆ ಕಾಡು ಪ್ರದೇಶ

ಇದೆ ಅಥವಾ ಗೋಮಾಳ ಇದೆ ಅಲ್ಲಿ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಕಸಾಯಿಖಾನೆ ಬೆಂಗಳೂರಿನ ಮಧ್ಯೆ ಭಾಗದಲ್ಲಿ ಇತ್ತು. ಆ ಕುರಿತು ಹೈಕೋರ್ಟ್‌ನಲ್ಲಿ ಒಂದು Writ Petition ಹಾಕಿದಾಗ ಅದನ್ನು ಹೊರವಲಯಕ್ಕೆ shift ಮಾಡಬೇಕೆಂದು direction ಕೊಟ್ಟರು. ಈಗಾಗಲೇ ನಮಗೆ ಗೊತ್ತಿರುವಂತೆ ಕಾಚರಕನಹಳ್ಳಿ ಮೊದಲು ಮಾಡುವುದಕ್ಕೆ ಹೋದೆವು. ಅಲ್ಲಿ ಗಲಾಟೆ ಆಯಿತು. ಆದಾದಮೇಲೆ ಇಗ್ಗಲೂರು, ಅದು habitationಗೆ, ಮನೆಗಳಿಗೆ ಬಹಳ ಹತ್ತಿರ ಇತ್ತು. ಈಗ ನಾವು 1,200 ಎಕರೆ ಪ್ರದೇಶದ KIADB ಜಾಗದಲ್ಲಿ ಮಾಡುತ್ತಿದ್ದೇವೆ. ಅದರ ಜೊತೆಗೆ ಎರಡನೇ ಹಂತದಲ್ಲಿ ಸುಮಾರು 4,000 ಎಕರೆ ಜಮೀನನ್ನು ಇನ್ನೂ ತೆಗೆದುಕೊಳ್ಳುತ್ತಿದ್ದೇವೆ. ಇದರ ಮಧ್ಯೆ ಭಾಗದಲ್ಲಿ ಸುಮಾರು 40 ಎಕರೆ ಜಾಗದಲ್ಲಿ ಈ ಒಂದು slaughter house ಅನ್ನು ಮಾಡುತ್ತಿದ್ದೇವೆ. ಈಗಾಗಲೇ ಚೆನ್ನೈ ಹಾಗೂ ಹೈದಾರಾಬಾದ್‌ನಲ್ಲಿ ಯಾವ ರೀತಿ hygienic ಆಗಿ ಜನರಿಗೆ ತೊಂದರೆಯಾಗದ ರೀತಿ, ಜನರಿಗೆ ಅಗತ್ಯವಿರುವ ಹಾಗೆ ಒಂದು slaughter house ಮಾಡುತ್ತಿದ್ದಾರೆ, ಅದನ್ನೇ ಇಲ್ಲಿ ನೋಡುತ್ತಿದ್ದೇವೆ. ನ್ಯಾಯಾಲಯದ direction ಇದೆ. ಅದಕ್ಕೋಸ್ಕರ ಇಲ್ಲಿ ಮಾಡಲು ಅವಕಾಶ ಕೊಡುಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ. ರಾಜು: ಮಾನ್ಯ ಅಧ್ಯಕ್ಷರೆ. . .

ಅಧ್ಯಕ್ಷರು: ಅವರು ಉತ್ತರವನ್ನು clear ಆಗಿ ಹೇಳಿದ್ದಾರೆ ಕುಳಿತುಕೊಳ್ಳಿ.

ಶ್ರೀ ಕೆ. ರಾಜು: ನಾಯ್ಯಾಲಯದ direction ಇದೆ ಎಂದು ಹೇಳಿದರೆ ಅದು ಖಂಡಿತ ಆಗುವುದಿಲ್ಲ. Public opinion ಇಲ್ಲದೇ ಅಲ್ಲಿ ಮಾಡಿದರೆ ಜಾಸ್ತಿ ಹೋರಾಟವಾಗುತ್ತದೆ. ಆ ರೀತಿ ಮಾಡಬಾರದು. ಹಾರೋಹಳ್ಳಿಯಿಂದ ಒಂದು ಕಿ.ಮೀ ದೂರದಲ್ಲಿ ನೀವು ಮಾಡಿದರೆ ಅದಕ್ಕೆ ಅರ್ಥವಿದೆಯೇ? ಕಸಾಯಿಖಾನೆಯನ್ನು ಹಾರೋಹಳ್ಳಿ ಊರಿನ ಪಕ್ಕದಲ್ಲಿ ಮಾಡುವುದಕ್ಕೆ ಆಗುತ್ತದೆಯೇ? ದಯಮಾಡಿ ಸರ್ಕಾರ ಚಿಂತನೆ ಮಾಡಬೇಕು. ಸರ್ಕಾರದ

ಸಾಕಷ್ಟು ಜಾಗ ಇದೆ ಎಲ್ಲಾದರೂ 5–10 ಕಿ.ಮೀ ದೂರದಲ್ಲಿ ಮಾಡಬಹುದಲ್ಲವೇ? ಅದಕ್ಕೆ ಹಠಕ್ಕೆ ಬೀಳಬಾರದು ಎಂದು ನಾನು ಹೇಳುತ್ತಿದ್ದೇನೆ.

ತ್ರಿಪುರಾಂತ ಕೆರೆಯ ಅಭಿವೃದ್ಧಿ

101(194) ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನಸೇವೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣದಲ್ಲಿರುವ ತ್ರಿಪುರಾಂತ ಕೆರೆಯನ್ನು ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಇಲಾಖೆಯ ಅನುದಾನದಿಂದ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಆ) ಹಾಗಿದ್ದಲ್ಲಿ, ಇದಕ್ಕಾಗಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಯಾವಾಗ ಸಲ್ಲಿಸಿದೆ.

ಇ) ಈ ಕೆರೆಯ ಅಭಿವೃದ್ಧಿಗೆ ಅಗತ್ಯವಿರುವ ಹಣವೆಷ್ಟು; ಈ ಹಣದಿಂದ ಯಾವ ಯಾವ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆ;

ಈ) ಕೇಂದ್ರ ಸರ್ಕಾರದಿಂದ ಅನುಮೋದನೆ ದೊರೆತಿದೆಯೇ; ಹಾಗಿದ್ದಲ್ಲಿ, ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ಇದಕ್ಕಾಗಿ ಎಷ್ಟು ಅನುದಾನ ಬಂದಿದೆ?

ಶ್ರೀ ಜಿ. ಜನಾರ್ಧನರೆಡ್ಡಿ (ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನಸೇವೆ ಸಚಿವರು)

ಅ) ಹೌದು.

ಆ) ದಿನಾಂಕ 14–6–2010ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ದಿನಾಂಕ 6–10–2010ರಂದು ಈ ಯೋಜನೆಯನ್ನು ಆದ್ಯತೆಯ ಮೇಲೆ ಪರಿಗಣಿಸುವಂತೆ ಪತ್ರ ಬರೆಯಲಾಗಿದೆ.

ಇ) ಈ ಕೆರೆಯ ಬಳಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿಗಾಗಿ ರೂ. 147.00 ಲಕ್ಷಗಳ ಪ್ರಸ್ತಾವನೆ ತಯಾರಿಸಲಾಗಿದೆ. ಸದರಿ ಹಣದಲ್ಲಿ, ತ್ರಿಪುರಾಂತಕೇಶ್ವರ ದೇವಸ್ಥಾನದ ಬಳಿ ಕೆರೆಯ ಪಕ್ಕದಲ್ಲಿ ಕಾಲುಪಥ, ಆಸನಗಳ